ದಿನಾಂಕ*: 14-11-2025* ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು: *2* ನೇ ಎದುರುದಾರರ ಪರವಾಗಿ ಶ್ರೀ ಕೆ.ಎಂ.ಜೆ. ವಕೀಲರಿಂದ *:-*

*8.* ನನ್ನ ತಂದೆ ತಾಯಿ ಈಗ ಬದುಕಿಲ್ಲ. ನಮ್ಮ ತಂದೆ ತಾಯಿಗೆ ಒಟ್ಟು *8* ಜನ ಮಕ್ಕಳು. ಅವರೆಂದರೆ ನಾನು, ನನ್ನ ಇಬ್ಬರು ತಮ್ಮಂದಿರು ಗಂಡುಮಕ್ಕಳು ಮತ್ತು *5* ಜನ ಹೆಣ್ಣುಮಕ್ಕಳು. ನನ್ನ ತಮ್ಮಂದಿರು ಮತ್ತು ಎಲ್ಲಾ ಸಹೋದರಿಯರು ಬದುಕಿದ್ದಾರೆ. ನಮ್ಮ ನಡುವೆ ವಿಭಾಗವಾಗಿದೆ, ಅದರ ಪ್ರಕಾರ ಸ್ವಾಧೀನಪಡಿಸಿಕೊಳ್ಳಲಾದ ಜಮೀನು ನನ್ನ ಹೆಸರಿಗೆ ಬಂದಿದೆ. ಅದನ್ನು ನಿರೂಪಿಸಲು ನೀವು ನ್ಯಾಯಾಲಯಕ್ಕೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ.

*9.* ಹಳಿಯೂರು ಗ್ರಾಮದ ಸರ್ವೆ ನಂಬರು *25* ರಲ್ಲಿ ನಿಮಗೆ ಸೇರಿದ *2* ಎಕರೆ *10* ಗುಂಟೆ ಖುಷ್ಕಿ ಜಮೀನನ್ನು ಭದ್ರಾ ಮೇಲ್ದಂಡೆ ಯೋಜನೆ ಪ್ಯಾಕೇಜ್-*2* ಕ್ಕೆ ಸಂಬಂಧಿಸಿದಂತೆ ಸ್ವಾಧೀನಪಡಿಸಿಕೊಳ್ಳಲಾಗಿದೆ ಎಂದರೆ ಸರಿ. ಅದಕ್ಕೆ ಪರಿಹಾರವಾಗಿ ಭೂಸ್ವಾಧೀನಾಧಿಕಾರಿಗಳು ನಿಮಗೆ ರೂ.*19,03,435/-* ಹಣವನ್ನು ನೀಡಿದ್ದಾರೆ ಎಂದರೆ ಸರಿ. ಸದರಿ ಹಣವನ್ನು ನೀವು ಯಾವುದೇ ವಿರೋಧವನ್ನು ವ್ಯಕ್ತಪಡಿಸದೇ ಸ್ವೀಕರಿಸಿದ್ದೀರಿ ಎಂದರೆ ಸರಿ.

*10.* ದಿ: *27-01-2016* ರಂದು ಸಾಕ್ಷಿಯು ಭೂಸ್ವಾಧೀನಾಧಿಕಾರಿಗಳಿಗೆ ಕಲಂ *65(1)* ರಡಿಯಲ್ಲಿ ಸಲ್ಲಿಸಿರುವ ತಕರಾರು ಅರ್ಜಿಯನ್ನು ಸಾಕ್ಷಿಗೆ ತೋರಿಸಿ ನೀವು ಭೂಸ್ವಾಧೀನಾಧಿಕಾರಿಗಳಿಗೆ ಸಲ್ಲಿಸಿರುವ ತಕರಾರು ಅರ್ಜಿ ಅದೇ ಎಂದು ಕೇಳಲಾಗಿ ಸಾಕ್ಷಿಯು ಅದನ್ನು ಒಪ್ಪಿ ಗುರುತಿಸಿದ ಮೇರೆಗೆ ಅದನ್ನು ನಿ.ಆರ್.*1* ಎಂದು ಗುರುತಿಸಲಾಯಿತು. ನೀವು ಕಾಲಪರಿಮಿತಿಯೊಳಗೆ ಭೂಸ್ವಾಧೀನಾಧಿಕಾರಿಗಳಿಗೆ ಸದರಿ ತಕರಾರು ಅರ್ಜಿಯನ್ನು ಸಲ್ಲಿಸಿಲ್ಲ ಎಂದರೆ ಸರಿ. ನಿಮಗೆ ನೀಡಿರುವ ಪರಿಹಾರ

ವೈಜ್ಞಾನಿಕವಾಗಿದೆ ಎಂದರೆ ಸರಿಯಲ್ಲ. ಕಾಯ್ದೆಯಲ್ಲಿ ತಿಳಿಸಿರುವ ಅಂಶಗಳನ್ನು ಪರಿಗಣಿಸಿ ಅದಕ್ಕೆ ಅನುಗುಣವಾಗಿ ನಿಮಗೆ ಪರಿಹಾರವನ್ನು ನೀಡಲಾಗಿದೆ ಎಂದರೆ ಸರಿಯಲ್ಲ. ನಿಮಗೆ ನೀಡಲಾದ ಪರಿಹಾರಕ್ಕಿಂತಲೂ ನಿಮ್ಮ ಜಮೀನು ಹೆಚ್ಚು ಬೆಲೆ ಬಾಳುತ್ತಿತ್ತು ಎಂದು ತೋರಿಸಲು ನೀವು ಯಾವುದೇ ದಾಖಲೆಗಳನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ.

*11.* ನಿಮ್ಮ ಮುಖ್ಯ ವಿಚಾರಣೆಯ ಖಂಡಿಕೆ *3* ರಲ್ಲಿ ತೋಟಗಾರಿಕೆ ಮರಗಳಿಗೆ ಸರಿಯಾದ ರೀತಿಯಲ್ಲಿ ಪರಿಹಾರವನ್ನು ನೀಡಿಲ್ಲ ಎಂದು ಹೇಳಿದ್ದೀರಿ ಸ್ವಾಧೀನಪಡಿಸಿಕೊಂಡ ನಿಮ್ಮ ಜಮೀನಿನಲ್ಲಿ ಯಾವುದೇ ಗಿಡಮರಗಳು ಇರಲಿಲ್ಲ ಎಂದರೆ ಸರಿ. ಸ್ವಾಧೀನಪಡಿಸಿಕೊಂಡ ನಿಮ್ಮ ಜಮೀನು ತರೀಕೆರೆ ಪಟ್ಟಣಕ್ಕೆ ಹೊಂದಿಕೊಂಡಂತೆ ಇದೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಕಲಂ 4(1) ಅಧಿಸೂಚನೆಯನ್ನು ಹೊರಡಿಸುವ ಕಾಲಕ್ಕೆ ಸ್ವಾಧೀನಪಡಿಸಿಕೊಂಡ ಜಮೀನಿಗೆ ಪ್ರತಿ ಗುಂಟೆ ರೂ.4,00,000/- ಮೌಲ್ಯವಿತ್ತು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಅದನ್ನು ನಿರೂಪಿಸಲು ನೀವು ನ್ಯಾಯಾಲಯಕ್ಕೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ.

12. ತರೀಕೆರೆ ಬಸ್ ನಿಲ್ದಾಣದಿಂದ ಹಳಿಯೂರಿಗೆ 4 ರಿಂದ 5 ಮೀ ದೂರವಾಗುತ್ತದೆ ಎಂದರೆ ಸಾಕ್ಷಿ ಒಂದು ಕಾಲು ಕಿ.ಮೀ. ದೂರವಾಗುತ್ತದೆ ಎನ್ನುತ್ತಾರೆ. ಹಳಿಯೂರು ಗ್ರಾಮದಿಂದ ಸ್ವಾಧೀನಪಡಿಸಿಕೊಂಡ ನಿಮ್ಮ ಜಮೀನಿಗೆ 2 ಕಿ.ಮೀ. ದೂರವಾಗುತ್ತದೆ ಎಂದರೆ ಸಾಕ್ಷಿ ಅರ್ಧ ಕಿ.ಮೀ ಒಳಗೆ ಇದೆ ಎನ್ನುತ್ತಾರೆ. ಆ ರೀತಿ ನೀವು ಹೇಳುತ್ತಿರುವುದು ಸುಳ್ಳು ಎಂದರೆ ಸರಿಯಲ್ಲ. ಅದನ್ನು ನಿರೂಪಿಸಲು ನೀವು ನ್ಯಾಯಾಲಯಕ್ಕೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

13. ಸ್ವಾಧೀನಪಡಿಸಿಕೊಂಡ ನಿಮ್ಮ ಜಮೀನನ್ನು ಭೂಪರಿವರ್ತನೆಗೊಳಿಸಿ ನಿವೇಶನಗಳನ್ನಾಗಿ ಮಾಡಿದ್ದರೆ ಪ್ರತಿ ಚದರಡಿಗೆ ರೂ.750/- ಮೌಲ್ಯ ಸಿಗುತ್ತಿತ್ತು

ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಸ್ವಾಧೀನಪಡಿಸಿಕೊಂಡ ನಿಮ್ಮ ಜಮೀನು ರಾಷ್ಟ್ರೀಯ ಹೆದ್ದಾರಿ 206 ರ ದಕ್ಷಿಣ ದಿಕ್ಕಿನಲ್ಲಿದೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಸದರಿ ರಸ್ತೆಯಿಂದ ಸ್ವಾಧೀನಪಡಿಸಿಕೊಂಡ ನಿಮ್ಮ ಜಮೀನಿಗೆ 2 ರಿಂದ 3 ಕಿ.ಮೀ. ದೂರವಾಗುತ್ತದೆ ಎಂದರೆ ಸಾಕ್ಷಿ 50 ಮೀಟರ್ ಒಳಗೆ ಇದೆ ಎನ್ನುತ್ತಾರೆ. ಅದನ್ನು ನಿರೂಪಿಸಲು ನೀವು ನ್ಯಾಯಾಲಯಕ್ಕೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

14. ನಿಮ್ಮ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದ ಖಂಡಿಕೆ 7 ಮತ್ತು 8 ರಲ್ಲಿ ತಿಳಿಸಿರುವ ಎಲ್ಲಾ ವಿಷಯಗಳು ಸುಳ್ಳು ಎಂದರೆ ಸರಿಯಲ್ಲ. ಅದನ್ನು ನಿರೂಪಿಸಲು ನೀವು ಯಾವುದೇ ದಾಖಲೆಯನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ದಿ: 24-06-2008 ರಂದು ನಗರಾಭಿವೃದ್ಧಿ ಪ್ರಾಧಿಕಾರದವರು ನಕ್ಷೆಯನ್ನು ಅನುಮೋಧಿಸಿದ್ದಾಗಿ ಹೇಳಿದ್ದೀರಿ ಅದರ ಪ್ರಕಾರ ಜಮೀನಿನ ಬಳಕೆ 2021 ರ ಬರುವಂತದ್ದು ಎಂದರೆ ಸರಿ.

15. ನೀರು ಕಾಲುವೆಯನ್ನು ತೋಡಿದ ಪರಿಣಾಮ ನಿಮ್ಮ ಜಮೀನಿನ ಅಂತರಜಲ ಮಟ್ಟ ಗಣನೀಯವಾಗಿ ಕುಸಿದಿದೆ ಎಂದು ಹೇಳಿರುವುದು ಸುಳ್ಳು, ಅದರಿಂದಾಗಿ ಅಂತರಜಲ ಮಟ್ಟ ಹೆಚ್ಚಾಗಿದೆ ಎಂದರೆ ಸಾಕ್ಷಿ ಮೊದಲಿಗೆ ಸರಿ ಎಂದು ನುಡಿದು ಕೆಲವೊಂದು ಕಡೆ ಕಡಿಮೆಯಾಗಿದೆ ಎನ್ನುತ್ತಾರೆ. ನೀರು ಕಾಲುವೆಯನ್ನು ತೋಡಿದ ಪರಿಹಾರ ಅಂತರಜಲ ಮಟ್ಟ ಕುಸಿದಿಲ್ಲ ಎಂದರೆ ಸರಿ.

16. ಸರ್ವೆ ನಂಬರು 25 ರಲ್ಲಿ ನಿಮಗೆ ಸೇರಿದ ಎಲ್ಲಾ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ ಎಂದರೆ ಸರಿ. ಆ ಸಮಯದಲ್ಲಿ ಬೆಳೆಗಳು ಮತ್ತು ಮರಗಿಡಗಳು ಇರಲಿಲ್ಲ ಎಂದರೆ ಸರಿ. ಹಾಗಾಗಿ ಕಾಲುವೆ ತೋಡಿದ್ದರಿಂದ ಬೆಳೆಗಳ ಇಳುವರಿ ಕಡಿಮೆಯಾಗಿದೆ ಮತ್ತು ತೋಟಗಾರಿಕೆ ಬೆಳೆಗಳಿಂದ ಭವಿಷ್ಯದಲ್ಲಿ ಬರುತ್ತಿದ್ದ ಆದಾಯ ಇಲ್ಲದಂತಾಗಿದೆ ಎಂದು ನಿಮ್ಮ ಮುಖ್ಯ ವಿಚಾರಣೆಯ ಖಂಡಿಕೆ 9 ಮತ್ತು 10 ರಲ್ಲಿ ತಿಳಿಸಿರುವ ಎಲ್ಲಾ ವಿಚಾರಗಳು ಸುಳ್ಳು ಎಂದರೆ ಸರಿ.

17. ನಿಮ್ಮ ಮುಖ್ಯ ವಿಚಾರಣೆಯ ಪ್ರಮಾಣಪತ್ರದ ಖಂಡಿಕೆ 10 ರಿಂದ 12 ರಲ್ಲಿ ತಿಳಿಸಿರುವ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ. ಸ್ವಾಧೀನಪಡಿಸಿಕೊಂಡ ನಿಮ್ಮ ಜಮೀನು ತುಂಬಾ ಮೌಲ್ಯಯುತವಾಗಿದ್ದು ಅದನ್ನು ಸ್ವಾಧೀನಪಡಿಸಿಕೊಂಡಿದ್ದರಿಂದ ನಿಮಗೆ ತುಂಬಾ ನಷ್ಟ ಉಂಟಾಗಿದೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಈ ಜಮೀನನ್ನು ಹೊರತುಪಡಿಸಿ ಭದ್ರಾ ಮೇಲ್ದಂಡೆ ಯೋಜನೆ ಪ್ಯಾಕೇಜ್-2 ಕ್ಕೆ ಸಂಬಂಧಿಸಿದಂತೆ ನಮ್ಮ ಬೇರೆ ಯಾವುದೇ ಜಮೀನನ್ನು ಸ್ವಾಧೀನಪಡಿಸಿಕೊಂಡಿಲ್ಲ.

18. ಪರಿಹಾರವನ್ನು ನಿಗದಿಪಡಿಸುವಲ್ಲಿ ತಾರತಮ್ಯ ಮಾಡಲಾಗಿದೆ ಎಂದು ನಿಮ್ಮ ಮುಖ್ಯ ವಿಚಾರಣೆಯಲ್ಲಿ ತಿಳಿಸಲಾಗಿದೆ ಆದರೆ ಆ ರೀತಿ ಯಾವುದೇ ತಾರತಮ್ಯ ಮಾಡಿಲ್ಲ ಎಂದರೆ ಸರಿ. ನಿಪಿ.5 ಮತ್ತು 7 ದಾಖಲೆಗಳು ಈ ಪ್ರಕರಣದ ಕಲಂ 4(1) ಅಧಿಸೂಚನೆಯದ ನಂತರದ್ದು ಎಂದರೆ ಸರಿ. ಹಾಗಾಗಿ ಸದರಿ ದಾಖಲೆಗಳಿಗೂ ಹೆಚ್ಚಿನ ಪರಿಹಾರ ಕೋರಿ ನೀವು ಸಲ್ಲಿಸಿರುವ ಅರ್ಜಿಗೂ ಯಾವುದೇ ಸಂಬಂದವಿಲ್ಲ ಎಂದರೆ ಸರಿಯಲ್ಲ. ನಿಪಿ.8 ದಾಖಲೆ ಸಹ ಈ ಪ್ರಕರಣದ ಕಲಂ 4(1) ಅಧಿಸೂಚನೆಯದ ನಂತರದ್ದು ಮತ್ತು ಸದರಿ ದಾಖಲೆಯ ಪ್ರಕಾರ 2021 ರ ನಂತರ ಜಾರಿಗೆ ಬರತಕ್ಕದ್ದು ಎಂದರೆ ಸರಿ.

19. ಸ್ವಾಧೀನಪಡಿಸಿಕೊಳ್ಳಲಾದ ಸಮಯದಲ್ಲಿ ನಿಮ್ಮ ಜಮೀನಿನಲ್ಲಿ ಯಾವುದೇ ತೋಟಗಾರಿಕೆ ಮರಗಿಡಗಳು ಇರದ ಕಾರಣ ನಿಪಿ.17 ರಿಂದ 20 ದಾಖಲೆಗಳು ನಿಮ್ಮ ಅರ್ಜಿಗೂ ಸಂಬಂದಪಡುವುದಿಲ್ಲ ಎಂದರೆ ಸರಿಯಲ್ಲ. ನಿಪಿ.20 ಚಾಕೋನಹಳ್ಳಿಗೆ ಸಂಬಂಧಿಸಿರುವ ಕಾರಣ ಸದರಿ ದಾಖಲೆಗಳೂ ನಿಮ್ಮ ಅರ್ಜಿಗೂ ಸಂಬಂದಪಡುವುದಿಲ್ಲ ಎಂದರೆ ಸರಿಯಲ್ಲ. ನಿಪಿ.21 ರ ಪ್ರಕಾರ ದಿಃ 01-07-2011 ರಿಂದ 04-07-2013 ರ ಸಾಲಿಗೆ ಸಂಬಂಧಿಸಿದಂತೆ ಹಳಿಯೂರು ಗ್ರಾಮದ ಖುಷ್ಕಿ ಜಮೀನಿಗೆ ಎಕರೆ ಒಂದಕ್ಕೆ ರೂ.2,00,000/- ದರವನ್ನು ನಿಗಪಡಿಸಲಾಗಿದೆ ಎಂದರೆ ಸರಿ. ಭೂಸ್ವಾಧೀನಾಧಿಕಾರಿಗಳು ನಿಮಗೆ ಅದಕ್ಕಿಂತಲೂ ಹೆಚ್ಚಿನ ಪರಿಹಾರವನ್ನು

ನೀಡಿದ್ದಾರೆ ಎಂದರೆ ಸಾಕ್ಷಿ ಹೌದು ಎಂದು ನುಡಿದು ಅದು ಕಡಿಮೆಯಾಗಿದೆ ಎನ್ನುತ್ತಾರೆ. ನಿಪಿ.21 ರ ಪ್ರಕಾರ ದಿ: 15-07-2013 ರಿಂದ ನಂತರದ ದರ ಪಟ್ಟಿಗಳೂ ಈ ಪ್ರಕರಣದ ಪ್ರಾಥಮಿಕ ಅಧಿಸೂಚನೆಯ ನಂತರದು ಆಗಿರುವ ಕಾರಣ ನಿಮ್ಮ ಅರ್ಜಿಗೆ ಅನ್ವಯವಾಗುವುದಿಲ್ಲ ಎಂದರೆ ಸರಿಯಲ್ಲ. ಕಾಯ್ದೆಯಲ್ಲಿ ತಿಳಿಸಿರುವ ಎಲ್ಲಾ ಅಂಶಗಳನ್ನು ಪರಿಗಣಿಸಿ ವೈಜ್ಞಾನಿಕವಾಗಿ ನಿಮಗೆ ಪರಿಹಾರವನ್ನು ನೀಡಲಾಗಿದ್ದು ನೀವು ಹೆಚ್ಚಿನ ಪರಿಹಾರಕ್ಕೆ ಅರ್ಹರಲ್ಲ ಎಂದರೆ ಸರಿಯಲ್ಲ. ಹೆಚ್ಚಿನ ಪರಿಹಾರವನ್ನು ಕೋರಿ ನೀವು ಸಲ್ಲಿಸಿರುವ ಅರ್ಜಿಗೆ ಪೂರಕವಾಗಿ ನೀವು ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಮತ್ತು ಸಮಂಜಸವಾದ ಕಾರಣಗಳನ್ನು ತಿಳಿಸಿಲ್ಲ ಎಂದರೆ ಸರಿಯಲ್ಲ.

ಪಾಟೀ ಸವಾಲು:

*(1 ನೇ ಎದುರುದಾರರ ಪರವಾಗಿ ಶ್ರೀ ಸಿ ಎಸ್ ಸರ್ಕಾರಿ ವಕೀಲರು 2 ನೇ ಎದುರುದಾರರ ಪರ ವಕೀಲರು ಮಾಡಿದ ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ).*

ಮರು ವಿಚಾರಣೆ: ಇಲ್ಲ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ